ಇ) ಈ ಕುರಿತಂತೆ ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮಾಲೋಚಿಸಲಾಗಿದ್ದು, ತ್ವರಿತವಾಗಿ ರಚಿಸಲಾಗುವುದು.

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರುಗಳ ವೇತನ

423 (616) ಶ್ರೀ ಮಂಜು.ಎ (ಅರಕಲಗೂಡು) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿ ಎಷ್ಟು ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಕೆಲಸ ನಿರ್ವಹಿಸುತ್ತಿದ್ದಾರೆ (ತಾಲ್ಲೂಕುವಾರು ವಿವರ ನೀಡುವುದು);

ಆ) ಈ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಎಷ್ಟು ಪ್ರಮಾಣದಲ್ಲಿ ಹಣ ನೀಡುತ್ತಿದೆ.

ಇ) ಈ ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ ವೇತನ ಹೆಚ್ಚಳ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಈ) ಈ ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರನ್ನು ಸರ್ಕಾರಿ ನೌಕರರನ್ನಾಗಿ ಪರಿಗಣಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ಹಾಸನ ಜಿಲ್ಲೆಯಲ್ಲಿ 2131 ಅಂಗನವಾಡಿ ಕಾರ್ಯಕರ್ತೆಯರು ಹಾಗೂ 2202 ಅಂಗನವಾಡಿ ಸಹಾಯಕಿಯರು ಕೆಲಸ ನಿರ್ವಹಿಸುತ್ತಿದ್ದಾರೆ ತಾಲ್ಲೂಕುವಾರು ವಿವರವನ್ನು ಅನುಬಂಧ–1 ರಲ್ಲಿ ಒದಗಿಸಿದೆ.

ಆ) ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ವತಿಯಿಂದ ನೀಡುತ್ತಿರುವ ಗೌರವಧನದ ವಿವರವನ್ನು ಅನುಬಂಧ–2 ರಲ್ಲಿ ಒದಗಿಸಿದೆ.

ಇ) ಇಲ್ಲ.

ಈ) ಇಲ್ಲ.

ಕರ್ಶಾ-1 (ಪ್ರಶ್ನೆ - 616)

ಹಾಸನ ಜಿಲ್ಲೆಯಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಮಾಹಿತಿ

ಕ್ರ. ಸಂ.	ಯೋಜನೆಯ ಹೆಸರು	ಪೂರ್ಣಪ್ರಮಾಣದ ಅಂಗನವಾಡಿ ಕೇಂದ್ರಗಳು			ಮಿನಿ ಅಂಗನವಾಡಿ ಕೇಂದ್ರಗಳು			ಅಂಗನವಾಡಿ ಸಹಾಯಕಿಯರು		
		ಮಂಜೂರು	ಭರ್ತಿ	ಖಾಲಿ	ಮಂಜೂರು	ಭರ್ತಿ	ಖಾಲಿ	ಮಂಜೂರು	ಭರ್ತಿ	ಖಾಲಿ
1	ಹಾಸನ	343	343	-	42	28	14	343	342	1
2	ಚನ್ನರಾಯಪಟ್ಟಣ	359	357	2	27	26	1	359	359	-
3	ಹೊಳೆನರಸೀಪುರ	242	240	2	12	5	7	242	242	-
4	ಬೇಲೂರು	225	221	4	76	70	6	225	231	11
5	ಸಕಲೇಶಪುರ	210	205	5	43	21	22	210	250	3
6	ಅಲೂರು	143	143	-	35	13	22	143	143	-
7	ಅರಸೀಕೆರೆ	423	378	45	25	24	1	423	385	38
8	ಅರಕಲಗೂಡು	252	244	8	15	15	-	252	250	2
	ಒಟ್ಟು	2197	2131	66	275	202	73	2197	2202	55

ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆ ಮಾಡುವಲ್ಲಿ ಸಹಾಯಕಿಯರಿಗೆ ಆದ್ಯತೆ ನೀಡಲಾಗಿದ್ದು ಸ್ಥಾನಗಳು ಖಾಲಿ ಇರುವುದಿಲ್ಲ.

ಅನುಬಂಧ – 2 (ಪ್ರಶ್ನೆ – 616)

ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ವತಿಯಿಂದ ನೀಡುತ್ತಿರುವ ಗೌರವಧನದ ವಿವರ:

ಕ್ರ. ಸಂ.	ವಿದ್ಯಾರ್ಹತೆಯ ವಿವರ	ಭಾರತ ಸರ್ಕಾರದಿಂದ ನೀಡುತ್ತಿರುವ ಗೌರವಧನ	ರಾಜ್ಯ ಸರ್ಕಾರ ದಿಂದ ನೀಡುತ್ತಿರುವ ಹೆಚ್ಚುವರಿ ಗೌರವಧನ	ಒಟ್ಟು
1	ಕಾರ್ಯಕರ್ತೆಯರಿಗೆ ಎಸ್.ಎಸ್.ಎಲ್.ಸಿ. ಫೇಲ್	ರೂ.1438	ರೂ.1000	ರೂ.2438
2	ಎಸ್.ಎಸ್.ಎಲ್.ಸಿ. ಫೇಲ್ ಜೊತೆಗೆ 5 ವರ್ಷದ ಅನುಭವ	ರೂ.1469	ರೂ.1000	ರೂ.2469
3	ಎಸ್.ಎಸ್.ಎಲ್.ಸಿ. ಫೇಲ್ ಜೊತೆಗೆ 10 ವರ್ಷದ ಅನುಭವ	ರೂ.1500	ರೂ.1000	ರೂ.2500
4	ಎಸ್.ಎಸ್.ಎಲ್.ಸಿ. ಉತ್ತೀರ್ಣ	ರೂ.1500	ರೂ.1000	ರೂ.2500
5	ಎಸ್.ಎಸ್.ಎಲ್.ಸಿ. ಉತ್ತೀರ್ಣ ಜೊತೆಗೆ 5 ವರ್ಷದ ಅನುಭವ	ರೂ.1531	ರೂ.1000	ರೂ.2531
6	ಎಸ್.ಎಸ್.ಎಲ್.ಸಿ. ಉತ್ತೀರ್ಣ ಜೊತೆಗೆ 10 ವರ್ಷದ ಅನುಭವ	ರೂ.1563	ರೂ.1000	ರೂ.2563

7	ಅಂಗನವಾಡಿ ಸಹಾಯಕಿಯರು	ರೂ.750	ರೂ.500	ರೂ.1250
8	ಮಿನಿ ಅಂಗನವಾಡಿ ಕಾರ್ಯಕರ್ತೆಯರು	ರೂ.750	ರೂ.500	ರೂ.1250

ಕಿತ್ತೂರು ರಾಣಿ ಚೆನ್ನಮ್ಮ ಶಾಲೆಯ ಶಿಕ್ಷಕರಿಗೆ ಆಗುತ್ತಿರುವ ಅನ್ಯಾಯಗಳು.

424 (737) ಶ್ರೀ ಮಂಜುನಾಥ್ ಹೆಚ್.ಪಿ. (ಹುಣಸೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗೆ ಪಾಠ ಮಾಡಲು ಶಿಕ್ಷಕರನ್ನು ಯಾವ ರೀತಿ ನೇಮಕ ಮಾಡಲಾಗಿದೆ (ಸಂಪೂರ್ಣ ವಿವರ ನೀಡುವುದು);

ಆ) ಈ ಶಿಕ್ಷಕರಿಗೆ ನಿಗಧಿಯಾಗಿರುವ ವೇತನ ಎಷ್ಟು; ಯಾವ ರೀತಿ ಸಂದಾಯ ಮಾಡಲಾಗುತ್ತಿದೆ; ನಿಗಧಿಪಡಿಸಿದೆಷ್ಟು; ಸಮರ್ಪಕ ರೀತಿಯಲ್ಲಿ ಹಣ ಶಿಕ್ಷಕರಿಗೆ ಪಾವತಿಯಾಗಿರುವುದೇ;

ಇ) ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಶಿಕ್ಷಕರಿಗೆ ಗುತ್ತಿಗೆ ಪಡೆದ ಸಂಸ್ಥೆಯಿಂದ ವಂಚನೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಗುತ್ತಿಗೆ ಏಜೆನ್ಸಿ ಮೇಲೆ ಕೈಗೊಂಡಿರುವ ಕ್ರಮವೇನು;

ಉ) ಹೀಗೆ ರಾಜ್ಯದಾದ್ಯಂತ ಶಿಕ್ಷಕರು ಗುತ್ತಿಗೆದಾರರಿಂದ ವಂಚನೆಗೊಳಗಾಗುತ್ತಿದ್ದು, ಏಜೆನ್ಸಿ ಮುಖಾಂತರ ನೇಮಕಾತಿ ಮಾಡದೆ ನೇರವಾಗಿ ಕಂಟ್ರಾಕ್ಟ್ ಆಧಾರದ ಮೇಲೆ ಇಲಾಖೆಯಿಂದ ನೇಮಕ ಮಾಡುವುದರ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಡಿ.ಸುಧಾಕರ (ಸಮಾಜ ಕಲ್ಯಾಣ ಸಚಿವರು) :

ಅ) ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗೆ ಶಿಕ್ಷಕರುಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಶೇ 60 ಕ್ಕಿಂತ ಹೆಚ್ಚು ಅಂಕಗಳಿಸಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತಿದೆ.

ಆ) ಮಾಹೆಯಾನ ರೂ.6000–00 ಗಳನ್ನು ಶಿಕ್ಷಕರಿಗೆ ವೇತನ ನಿಗಧಿ ಪಡಿಸಿದ್ದು, ಈ ವೇತನವನ್ನು ಜಿಲ್ಲಾ ಪಂಚಾಯತ್‌ನಿಂದ ಹೊರಗುತ್ತಿಗೆ